# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

MD RGRHCL 01 BIS 52 2010 Date: 21.02.2011

ಇವರಿಗೆ,

**ಅತೀ ಪ್ರಾಮುಖ್ಯ**

ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್.
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯತ್.

ಮಾನ್ಯರೇ,

**ವಿಷಯ** : **ಬಸವ ಇಂದಿರಾ ವಸತಿ ಯೋಜನೆಯಡಿ 2010-2011ನೇ ಶ್ರೇಣಿಯಡಿ ಒಟ್ಟು 4000 ಮನೆಗಳನ್ನು ನಿಗಧಿಪಡಿಸಿರುವ ಬಗ್ಗೆ**

**ಉಲ್ಲೇಖ**
1 ಸರ್ಕಾರದ ಆದೇಶ ಸಂಖ್ಯೆ: ವಇ 86 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 07.07.2010
2 ಸರ್ಕಾರದ ಆದೇಶ ಸಂಖ್ಯೆ: ವಇ 86 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 24.09.2010
3 ಸರ್ಕಾರದ ಆದೇಶ ಸಂಖ್ಯೆ: ವಇ 86 ಹೆಚ್‌ಎಎಂ 2009, ಬೆಂಗಳೂರು, ದಿನಾಂಕ: 09.02.2010
4 ನಿಗಮದ ಪತ್ರ ಸಂಖ್ಯೆ MD RGRHCL 01 SDP 01 2010, Dated: 21.07.2010

---

ಬಸವ ಇಂದಿರಾ ವಸತಿ ಯೋಜನೆಯಡಿ ಸರ್ಕಾರ ಉಲ್ಲೇಖ ಪತ್ರ (1) ರಲ್ಲಿ ತಿಳಿಸಿದ ನಿರ್ದೇಶನದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1000 ಮನೆಗಳನ್ನು ನೀಡಲಾಗಿದೆ. ತದನಂತರ ಸರ್ಕಾರದ ಮತ್ತೇ ಉಲ್ಲೇಖಿತ ಪತ್ರ (2) ರಲ್ಲಿ ನೀಡಿದ ನಿರ್ದೇಶನದ ಮೇರೆಗೆ *ಹೆಚ್ಚುವರಿಯಾಗಿ 1000 ಮನೆಗಳ ನಿರ್ಮಾಣಕ್ಕಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ ಎಂದು ತಿಳಿಸಲಾಗಿರುತ್ತದೆ.*

*ಈಗ ಸರ್ಕಾರವು ಈ ಯೋಜನೆಯಡಿ ನೀಡಲಾಗಿರುವ ನಿರ್ದೇಶನದ ಮೇರೆಗೆ ಈ ಕೆಳಕಂಡಂತೆ ಕ್ರಮಗಳನ್ನು ವಹಿಸಲು ತಿಳಿಸಲಾಗಿದೆ.*

1. ಮೊದಲನೆಯದಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಲಭ್ಯವಿರುವ ಗುಡಿಸಲುವಾಸಿಗಳ ಪೈಕಿ 1000 ಅರ್ಹ ಗುಡಿಸಲುವಾಸಿಗಳನ್ನು, ಉಲ್ಲೇಖ ಪತ್ರ (1)ರಲ್ಲಿ ತಿಳಿಸಿದಂತೆ ಆಯ್ಕೆ ಮಾಡಿ ನಿಗಮದ ಅನುಮೋದನೆಯನ್ನು ನಿಯಮಾನುಸಾರ ಪಡೆದುಕೊಳ್ಳುವುದು.
2. ಎರಡನೆಯದಾಗಿ ಲಭ್ಯವಿರುವ ಗುಡಿಸಲುವಾಸಿಗಳ ಪಟ್ಟಿಯಲ್ಲಿ ಹೆಚ್ಚುವರಿಯಾಗಿ 1000 ಫಲಾನುಭವಿಗಳನ್ನು ಮುಂಗಡವಾಗಿ ಆಯ್ಕೆ ಮಾಡಿಕೊಂಡು ನಿಗಮಕ್ಕೆ ಸಲ್ಲಿಸಲು ಸೂಚಿಸಲಾಗಿದ್ದು ಈಗ ಉಲ್ಲೇಖ ಪತ್ರ (3) ರಲ್ಲಿ ಸರ್ಕಾರ ನೀಡಿದ ನಿರ್ದೇಶನದ ಮೇರೆಗೆ ಈ ಹೆಚ್ಚುವರಿಯಾಗಿ ಫಲಾನುಭವಿಗಳ ಆಯ್ಕೆ ಪ್ರಾರಂಭಿಸಿಕೊಳ್ಳಲು ತಿಳಿಸಲಾಗಿದ್ದ 1000 ಗುರಿಗೂ ಸಹಾ ಫಲಾನುಭವಿಗಳನ್ನು ಆಯ್ಕೆ ಮಾಡಿ ಪಟ್ಟಿಗೆ ಅನುಮೋದನೆ ಪಡೆದುಕೊಳ್ಳುವುದು.
3. ತದನಂತರ ಆಯಾ ವಿಧಾನಸಭಾ ಕ್ಷೇತ್ರದಲ್ಲಿ ಒಂದು ವೇಳೆ ಅರ್ಹ ಫಲಾನುಭವಿಗಳು ಲಭ್ಯವಿದ್ದಲ್ಲಿ ಇನ್ನೂ ಹೆಚ್ಚುವರಿಯಾಗಿ 2000 ಮನೆಗಳವರೆಗೆ ಫಲಾನುಭವಿಗಳನ್ನು ಆಯ್ಕೆಗೊಳಿಸಿ ನಿಗಮದ ಅನುಮೋದನೆ ಪಡೆದುಕೊಳ್ಳಲು ಅನುಮತಿ ನೀಡಿದೆ.

4. ಇದಲ್ಲದೇ ಈಗಾಗಲೇ ಉಲ್ಲೇಖ ಪತ್ರ (4) ರಲ್ಲಿ ತಿಳಿಸಿರುವಂತೆ ಡಾ. ನಂಜುಂಡಪ್ಪ ವರದಿಯಲ್ಲಿ ಬರುವ ಹಿಂದುಳಿದ ತಾಲ್ಲೂಕುಗಳಿಗೂ ನಿಗದಿಪಡಿಸಿರುವ ಗುರಿಗೆ ತಕ್ಕಂತೆ ಸಹಾ ಫಲಾನುಭವಿಗಳನ್ನು ಆಯ್ಕೆ ಮಾಡಿ ಪ್ರತ್ಯೇಕವಾಗಿ ಅನುಮೋದನೆಯನ್ನು ಪಡೆದುಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು

5. ಬಸವ ಇಂದಿರಾ ವಸತಿ ಯೋಜನೆಯಡಿ ಹಾಗೂ ಎಸ್.ಡಿ.ಪಿ. ಯೋಜನೆಯಡಿ ಆಯ್ಕೆಯಾಗುವ ಗ್ರಾಮವಾರು ಹಾಗೂ ಪಂಚಾಯಿತಿವಾರು ವಿವರಗಳನ್ನು ಮೂರು ಕಾಲಂಗಳಲ್ಲಿ ಈ ಕೆಳಗೆ ತಿಳಿಸಿರುವಂತೆ ನಿಗಮಕ್ಕೆ ಫ್ಯಾಕ್ಸ್ ಮುಖೇನ ಕಳುಹಿಸಬೇಕು.

ಜಿಲ್ಲೆಯ ಹೆಸರು: ತಾಲ್ಲೂಕಿನ ಹೆಸರು:

| ವಿಧಾನ ಸಭಾ ಕ್ಷೇತ್ರದ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಗ್ರಾಮದ ಹೆಸರು | ಒಟ್ಟು 4000 ಮನೆಗಳ ಗುರಿಗೆ ಆಯ್ಕೆಯಾದ ಗ್ರಾಮವಾರು ವಿವರ | ಎಸ್.ಡಿ.ಪಿ. ಯೋಜನೆಯಡಿ ನೀಡಲಾದ ಗುರಿಗೆ ಆಯ್ಕೆಯಾದ ಗ್ರಾಮವಾರು ವಿವರ | ಒಟ್ಟು |
|---|---|---|---|---|---|
| | | | | | |

6. **ಫಲಾನುಭವಿಗಳ ಪಟ್ಟಿಗೆ ಅನುಮೋದನೆ ಪಡೆದುಕೊಳ್ಳುವ ಬಗ್ಗೆ:** ಈಗಾಗಲೇ ಎಲ್ಲಾ ಗುಡಿಸಲುವಾಸಿಗಳ ವಿವರಗಳು ಆನ್‌ಲೈನ್‌ನಲ್ಲಿ ಲಭ್ಯವಿರುವುದರಿಂದ ಈ ಪಟ್ಟಿಯಿಂದ ಜಾಗೃತಿ ಸಮಿತಿಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಂಡು **(Beneficiary Menu → TP Approval → G.P.s Yet to be Approved → Go → Edit → Update → Scheme Selection → Series Selection).** ಅನುಮೋದನೆ ನೀಡುವುದು, ಒಂದು ವೇಳೆ ಜಾಗೃತಿ ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಯ ಹೆಸರು ಕೈಬಿಟ್ಟು ಹೋಗಿದ್ದಲ್ಲಿ, ಸದರಿ ಫಲಾನುಭವಿಯನ್ನು ಹೊಸದಾಗಿ ಸೇರಿಸಿ **(Houseless/Siteless Families Menu → Add)** ಮೇಲೆ ತಿಳಿಸಿರುವಂತೆ ಅನುಮೋದಿಸಿದ ನಂತರ ~~ತ್ರಿಪ್ರತಿಯಲ್ಲಿ ಪ್ರಿಂಟ್ ತೆಗೆದುಕೊಂಡು ಪಿ.ಡಿ.ಓ/ಕಾರ್ಯದರ್ಶಿ, ಗ್ರಾ.ಪಂ. ಅಧ್ಯಕ್ಷರು,~~ ಕಾರ್ಯನಿರ್ವಹಣಾಧಿಕಾರಿಗಳು, ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಹಿಯೊಂದಿಗೆ ನಿಗಮಕ್ಕೆ ಪಟ್ಟಿಗಳನ್ನು ಖುದ್ದು ಕಳುಹಿಸಿ ಅನುಮೋದನೆ ಪಡೆದುಕೊಳ್ಳಲು ಕೋರಿದೆ.

ಫಲಾನುಭವಿಗಳ ಪಟ್ಟಿಗೆ ನಿಗಮದಿಂದ ಅನುಮೋದನೆ ಪಡೆದುಕೊಂಡ ನಂತರ ಸಂಬಂಧಪಟ್ಟ ಗ್ರಾಮಪಂಚಾಯಿತಿಯು ದಾಖಲೀಕರಣ ನಿರ್ವಹಿಸಿ ಕಾಮಗಾರಿ ಆದೇಶವನ್ನು ನೀಡುವುದು. ತದನಂತರ ಫಲಾನುಭವಿಗಳು ನಿರ್ಮಿಸಿಕೊಳ್ಳುವ ತಳಪಾಯ, ಲಿಂಟಲ್, ಛಾವಣಿ ಹಂತಗಳನ್ನು ಆನ್‌ಲೈನ್‌ನಲ್ಲಿ ಫಲಾನುಭವಿವಾರು ನಮೂದಿಸಿದ್ದಲ್ಲಿ, ಸದರಿ ಪ್ರಗತಿಯನ್ನು ಜಿ.ಪಿ.ಎಸ್. ಮೂಲಕ ಪರಿಶೀಲಿಸಿ ಅನುದಾನವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಬಿಡುಗಡೆಗೊಳಿಸಲಾಗುವುದು.

ಒಟ್ಟಾರೆಯಾಗಿ ಬಸವ ಇಂದಿರಾ ವಸತಿ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 4000 ಮನೆಗಳ ಗುರಿಯನ್ನು ನೀಡಿದಂತಾಗಿ, ಈ ಗುರಿಗೆ ಅನುಗುಣವಾಗಿ ಅರ್ಹ ಗುಡಿಸಲುವಾಸಿಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ಸೂಚಿಸಿದೆ. ಒಂದು ವೇಳೆ ಆಯಾ ವಿಧಾನಸಭಾ ಕ್ಷೇತ್ರದಲ್ಲಿ ಗುಡಿಸಲುವಾಸಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ಕಡೆಗಳಲ್ಲಿ ಮಾತ್ರ ಸದರಿ ಗುರಿಗೆ ಅರ್ಹ ವಸತಿ ರಹಿತರನ್ನು (ನಿವೇಶನ ಹೊಂದಿದ್ದು, ಅವಿಭಕ್ತ ಕುಟುಂಬದಲ್ಲಿ ವಾಸವಿರುವವರು/ನಿವೇಶನ ಹೊಂದಿದ್ದು, ಬಾಡಿಗೆ ಮನೆಯಲ್ಲಿರುವವರು/ಶಿಥಿಲಗೊಂಡಿರುವ ಮನೆಗಳಲ್ಲಿ ವಾಸವಿರುವವರು) ಆಯ್ಕೆ ಮಾಡಿ ಪಟ್ಟಿಗೆ ಅನುಮತಿ ಪಡೆದುಕೊಳ್ಳಬಹುದಾಗಿದೆ.

ಈ ಮನೆಗಳ ಹಂಚಿಕೆಗಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಪಾರದರ್ಶಕತೆಯನ್ನು ಕಾಪಾಡಿಕೊಂಡು ಅರ್ಹ ಮತ್ತು ನಿಜವಾದ ಫಲಾನುಭವಿಗಳಿಗೆ ಮನೆಗಳನ್ನು ತಲುಪಿಸುವ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಆಯಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಹಾಗೂ ತಾಲ್ಲೂಕಿನ ಕಾರ್ಯ

ನಿರ್ವಹಣಾಧಿಕಾರಿಗಳು ಮತ್ತು ಗ್ರಾಮಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪ್ರಮುಖ ಪಾತ್ರ ವಹಿಸುವುದು. ಸರ್ಕಾರದ ನಿರ್ದೇಶನದಂತೆ ಒಂದು ವೇಳೆ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದೆ ಆದರೆ ಸಂಬಂಧಪಟ್ಟ ಅಧಿಕಾರಿಗಳು ಕಾನೂನಿನ ದೃಷ್ಟಿಯಿಂದ ತಪ್ಪಿತಸ್ಥರಾಗುತ್ತಾರೆಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಾ ಆಯ್ಕೆಯಲ್ಲಿ ಕಟ್ಟುನಿಟ್ಟಾಗಿ ಪಾರದರ್ಶಕತೆಯನ್ನು ಪಾಲಿಸುವಂತೆ ಕೋರಿದೆ.

**ಗ್ರಾಮ ಪಂಚಾಯಿತಿವಾರು ಫಲಾನುಭವಿಗಳ ಪಟ್ಟಿಗೆ ನಿಗಮದ ಅನುಮೋದನೆಯನ್ನು "ಆಯ್ಕೆಯಾಗುವ ಫಲಾನುಭವಿಗಳು ನಿರ್ಮಿಸಿಕೊಳ್ಳುವ ಮನೆಯನ್ನು ಜಿ.ಪಿ.ಎಸ್ ಮೂಲಕ ಪರಿಶೀಲಿಸಿ ಅನುದಾನವನ್ನು ಪಾವತಿಸಲಾಗುವುದೆಂಬ ಷರತ್ತುಗೊಳಪಟ್ಟು" ನೀಡಲಾಗುತ್ತದೆ.**

ಈ ನೂತನ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 4000 ಮನೆಗಳ ಗುರಿಯನ್ನು ನೀಡಿರುವುದರಿಂದ ನಿಗಮಕ್ಕೆ ಸಲ್ಲಿಸಿರುವ/ಸಲ್ಲಿಸಲಾಗುವ ಯಾವುದೇ ಹೆಚ್ಚುವರಿ ಮನೆಗಳ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ. ಆದ್ದರಿಂದ ನಿಗಮದಿಂದ ಈಗಾಗಲೇ ತಮಗೆ ಕಳುಹಿಸಿಕೊಟ್ಟಿರುವ ಎಲ್ಲಾ ಹೆಚ್ಚುವರಿ ಮನೆಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಹೆಚ್ಚುವರಿಯಾಗಿ ನೀಡಲಾಗಿರುವ ಮನೆಗಳ ಗುರಿಯಲ್ಲೇ ಸದರಿ ಫಲಾನುಭವಿಗಳು ಅರ್ಹರಿದ್ದಲ್ಲಿ ಪರಿಗಣಿಸಿಕೊಳ್ಳುವುದು ಹಾಗೂ ನಿಗಮದಿಂದ ತಮ್ಮ ತಾಲ್ಲೂಕಿಗೆ ಯಾವುದಾದರೂ ವಸತಿ ಯೋಜನೆಯಡಿ ಹೆಚ್ಚುವರಿ ಮನೆಗಳನ್ನು ಮಂಜೂರು ಮಾಡಿದ್ದು, ಸದರಿ ಮನೆಗಳ ಗುರಿಗೆ ಎದುರಾಗಿ ನಿಗದಿತ ಸಮಯದಲ್ಲಿ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ಪಡೆಯದೇ ಹೆಚ್ಚುವರಿ ಗುರಿಯು ರದ್ದುಗೊಂಡಿದ್ದಲ್ಲಿ ಸದರಿ ಫಲಾನುಭವಿಗಳನ್ನೂ ಸಹ ಈ ಹೆಚ್ಚುವರಿ ಮನೆಗಳ ಗುರಿಯಲ್ಲಿ ಪರಿಗಣಿಸಿಕೊಳ್ಳಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

N. S. [signature]

ಎನ್.ಎಸ್. ಮಹದೇವ ಪ್ರಸಾದ್
ಪ್ರಧಾನ ವ್ಯವಸ್ಥಾಪಕರು
(ಕಾರ್ಯಕ್ರಮ ಅನುಷ್ಠಾನ)

ಪ್ರತಿಯನ್ನು

- ಎಲ್ಲಾ ವಿಧಾನಸಭಾ ಕ್ಷೇತ್ರಗಳ ಮಾನ್ಯ ಶಾಸಕರುಗಳಿಗೆ ಕಳುಹಿಸುತ್ತಾ, ಈ ಹೆಚ್ಚುವರಿ ಮನೆಗಳ ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳನ್ನು ನಿಗದಿತ ಸಮಯದಲ್ಲಿ ಆಯ್ಕೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸೂಚನೆ ನೀಡುವುದು ಹಾಗೂ ತಮ್ಮ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚುವರಿ ಮನೆಗಳನ್ನು ಮಂಜೂರು ಮಾಡುವಂತೆ ಸನ್ಮಾನ್ಯ ವಸತಿ ಸಚಿವರಿಗೆ ಅಥವಾ ನಿಗಮಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿದ್ದಲ್ಲಿ, ಸದರಿ ಪ್ರಸ್ತಾವನೆಯಲ್ಲಿ ಕೋರಿರುವ ಹೆಚ್ಚುವರಿ ಮನೆಗಳನ್ನು ಬಸವ ಇಂದಿರಾ ವಸತಿ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟಾರೆಯಾಗಿ ನೀಡಿರುವ 4000 ಮನೆಗಳ ಗುರಿಯಲ್ಲಿ ಪರಿಗಣಿಸಿಕೊಳ್ಳಲು ಕೋರಿದೆ.